**All India Radio: Bangalore**
**National Bulletin In Kannada**
**30.03.2025 19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.03.2025 19.35 p.m.**

**<><><><>**

ಮುಖ್ಯಾಂಶಗಳು

1. ಬಡವರಿಗೆ ಅತ್ಯುತ್ತಮ ಆರೋಗ್ಯ, ಉಪಚಾರ ಲಭ್ಯತೆ ; ಸರ್ಕಾರದ ಆದ್ಯತೆ - ಪ್ರಧಾನಿ ನರೇಂದ್ರ ಮೋದಿ
2. ಸಮುದಾಯ ಮಟ್ಟದಲ್ಲಿ ಮಳೆನೀರು ಹಿಡಿದಿಡುವ ಕಾರ್ಯ ಕೈಗೊಳ್ಳಲು ಮನದ ಮಾತಿನಲ್ಲಿ ಪ್ರಧಾನಮಂತ್ರಿ ಕರೆ
3. ಛತ್ತೀಸ್‌ಗಢದಲ್ಲಿ ೫೦ ಮಾವೋವಾದಿಗಳ ಶರಣಾಗತಿ
4. ಐಪಿಎಲ್ ಟಿ-೨೦ ಕ್ರಿಕೆಟ್ ; ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ೭ ವಿಕೆಟ್‌ಗಳ ಜಯ

<><><><>

ಕಡುಬಡವರಿಗೆ ಅತ್ಯುತ್ತಮ ವೈದ್ಯಕೀಯ ಉಪಚಾರ ಖಾತರಿ ಪಡಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು, ಮಹಾರಾಷ್ಟ್ರದ ನಾಗ್ಪುರದಲ್ಲಿಂದು ಮಾದವ ನೇತ್ರಾಲಯ ಉತ್ಕೃಷ್ಟ ಕೇಂದ್ರಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿ, ಆಯುಷ್ಮಾನ್ ಭಾರತ್ ಯೋಜನೆಯಡಿ ಕೋಟ್ಯಾಂತರ ಜನರು ಉಚಿತ ವೈದ್ಯಕೀಯ ಉಪಚಾರ ಪಡೆಯುತ್ತಿದ್ದಾರೆ ಎಂದರು. ಜನೌಷಧಿ ಕೇಂದ್ರಗಳಿಂದ ಬಡವರು ಹಾಗೂ ಮಧ್ಯಮ ವರ್ಗದ ನಾಗರಿಕರು ಕೈಗೆಟುಕುವ ದರಗಳಲ್ಲಿ ಔಷಧಿಗಳನ್ನು ಪಡೆಯುತ್ತಿದ್ದಾರೆ. ಸರ್ಕಾರ ವೈದ್ಯಕೀಯ ಉಪಚಾರ ಲಭ್ಯತೆಗೆ ಗಮನ ನೀಡುತ್ತಿದೆ. ವೈದ್ಯಕೀಯ ಕಾಲೇಜುಗಳು ಹಾಗೂ ಅಖಿಲ ಭಾರತೀಯ ವೈದ್ಯ ವಿಜ್ಞಾನ ಸಂಸ್ಥೆ - ಏಮ್ಸ್ ಘಟಕಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ದ್ವಿಗುಣಗೊಂಡಿದೆ. ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು ಮೂರುಪಟ್ಟು ಹೆಚ್ಚಿಸಲಾಗಿದೆ ಎಂದು ಹೇಳಿದರು. ರಾಷ್ಟ್ರೀಯ ಸ್ವಯಂ ಸೇವಕರು ದೇಶದ ಎಲ್ಲ ಭಾಗಗಳು ಹಾಗೂ ಸಮಾಜದ ಎಲ್ಲ

ರಂಗಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಸೈನಿಕರಂತೆ ವಿಕೋಪ ನಿರ್ವಹಣಾ ಸಂದರ್ಭಗಳಲ್ಲಿ ಶಿಸ್ತಿನಿಂದ ಕಾರ್ಯ ನಿರ್ವಹಿಸಿದ್ದಾರೆ ಎಂದು ಪ್ರಧಾನಿ ಹೇಳಿದರು. ಆರ್‌ಎಸ್‌ಎಸ್ ಸಂಸ್ಥಾಪಕ ಡಾ. ಕೇಶವ್ ಹೆಡಗೆವಾರ್ ಹಾಗೂ ಮಾಧವ್‌ರಾವ್ ಗೋಲ್ವಾಳ್ಕರ್ ಅವರ ಕೊಡುಗೆ ಪ್ರಸ್ತಾಪಿಸಿದ ಪ್ರಧಾನಿ ಅವರುಗಳ ರಾಷ್ಟ್ರೀಯ ಮನೋಭಾವ ಪ್ರೇರಣಾದಾಯಕವಾಗಿದೆ ಎಂದರು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಕೇಂದ್ರ ಸಚಿವ ನಿತಿನ್ ಗಡ್ಕರಿ, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ನಂತರ ಪ್ರಧಾನಿಯವರು ನಾಗ್ಪುರದಲ್ಲಿ ಸೋಲಾರ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಲಿಮಿಟೆಡ್‌ನ ಶಸ್ತ್ರಗಾರ ಘಟಕಕ್ಕೂ ಭೇಟಿ ನೀಡಿದರು. ಶಸ್ತ್ರರಹಿತ ವಾಯುನೌಕೆ - ಯುಎವಿ ಗಳಿಗಾಗಿ ಹೊಸದಾಗಿ ನಿರ್ಮಿಸಲಾದ ಏರ್‌ಸ್ಟ್ರಿಪ್ ಉದ್ಘಾಟಿಸಿದರು. ಇದಕ್ಕೂ ಮುನ್ನ ಪ್ರಧಾನಿಯವರು ದೀಕ್ಷಾ ಭೂಮಿಗೆ ಭೇಟಿ ನೀಡಿ, ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಸ್ಮರಣೆಗೆ ಗೌರವ ನಮನ ಸಲ್ಲಿಸಿದರು. ಸ್ಮೃತಿ ಮಂದಿರಕ್ಕೆ ಭೇಟಿ ನೀಡಿ, ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಸಂಸ್ಥಾಪಕರಾದ ಡಾ. ಕೇಶವ್ ಹೆಡಗೆವಾರ್ ಹಾಗೂ ಮಾಧವ್‌ರಾವ್ ಗೋಲ್ವಾಳ್ಕರ್ ಅವರ ನೆನಪಿಗೆ ಗೌರವ ಸಲ್ಲಿಸಿದರು. ನಂತರ ಛತ್ತೀಸ್‌ಗಢದ ಬಿಲಾಸ್‌ಪುರಕ್ಕೆ ತೆರಳಿದ ಪ್ರಧಾನಿಯವರು ಸುಮಾರು ೩೩ ಸಾವಿರದ ೭೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ಹಾಗೂ ಸಮರ್ಪಣೆ ನೆರವೇರಿಸಿದರು. ಛತ್ತೀಸ್‌ಗಢ ರಾಜ್ಯದಾದ್ಯಂತ ನಿರ್ಮಿಸಲಾಗಿರುವ ೧೩೦ ಪಿಎಂಶ್ರೀ ಶಾಲೆಗಳನ್ನು ಸಮರ್ಪಿಸಿದರು. ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ ೩ ಲಕ್ಷ ಫಲಾನುಭವಿಗಳಿಗಾಗಿ ನಿರ್ಮಿಸಲಾದ ಮನೆಗಳ ಗೃಹಪ್ರವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

<><><><>

ಸಮುದಾಯ ಮಟ್ಟದಲ್ಲಿ ಮಳೆನೀರು ಹಿಡಿದಿಡುವ ಕಾರ್ಯ ಕೈಗೊಳ್ಳಬೇಕೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಆಕಾಶವಾಣಿ ಮಾಸಿಕ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಇಂದು ಮಾತನಾಡಿರುವ ಪ್ರಧಾನಿಯವರು ಬೇಸಿಗೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ನೀರು ಕೊಯ್ಲು ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಕೆಲಸಗಳು ವೇಗ ಪಡೆದುಕೊಳ್ಳುತ್ತಿವೆ. ಕೊಳವೆ ಬಾವಿಗಳ ಮರುಪೂರಣ ಅಲ್ಲದೇ ಸಾವಿರಾರು ಕೃತಕ ಕೊಳ, ಚೆಕ್ ಡ್ಯಾಂ, ಸಮುದಾಯ

ಗುಂಡಿಗಳನ್ನು ನಿರ್ಮಿಸಲಾಗುತ್ತಿದೆ. ಮಳೆ ನೀರು ಹಿಡಿಯುವ ಅಭಿಯಾನಕ್ಕೆ ಸಿದ್ಧತೆ ನಡೆದಿದೆ ಎಂದು ತಿಳಿಸಿದ್ದಾರೆ. ಕಳೆದ ಏಳೆಂಟು ವರ್ಷದಲ್ಲಿ ಮರುಪೂರಣ ರಚನೆಗಳ ಮೂಲಕ ೧೧ ಶತಕೋಟಿ ಘನಮೀಟರ್‌ಗಿಂತ ಹೆಚ್ಚು ನೀರನ್ನು ಸಂಗ್ರಹಿಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದ ಗದಗ ಜಿಲ್ಲೆಯ ಜನರು ಒಂದು ಮಾದರಿಯನ್ನು ರೂಪಿಸಿದ್ದಾರೆ. ಗ್ರಾಮಸ್ಥರು ಹಾಗೂ ಸಾಮಾಜಿಕ ಸಂಸ್ಥೆಗಳ ನೆರವಿನಿಂದ ಹೂಳೆತ್ತುವ ಕೆಲಸ ಕೈಗೊಳ್ಳಲಾಗಿದ್ದು, ಈಗ ಮಳೆಗಾಲಕ್ಕಾಗಿ ಕಾಯಲಾಗುತ್ತಿದೆ. ಇದು ಕ್ಯಾಚ್ ದ ರೇನ್ ಅಭಿಯಾನದ ಉತ್ತಮ ಉದಾಹರಣೆಯಾಗಿದೆ. ಸಮುದಾಯ ಮಟ್ಟದಲ್ಲಿ ಇಂತಹ ಪ್ರಯತ್ನಗಳಿಗೆ ಕೈಜೋಡಿಸಬೇಕು ಎಂದು ಪ್ರಧಾನಿ ಹೇಳಿದರು. ಆರೋಗ್ಯ ಹಾಗೂ ಸದೃಢತೆಗಾಗಿ ಜನರಲ್ಲಿ ಪೋಷಣೆ ಸಂಬಂಧಿತ ಜಾಗೃತಿ ಮೂಡಿಸಬೇಕು. ದೆಹಲಿಯಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಫಿಟ್ ಇಂಡಿಯಾ ಕಾರ್ನಿವಲ್ ಮಾದರಿಯಲ್ಲೇ ಎಲ್ಲೆಡೆ ಕಾರ್ನಿವಲ್‌ಗಳನ್ನು ಸಂಘಟಿಸಬೇಕು. ಈ ಉಪಕ್ರಮದಲ್ಲಿ ಮೈ ಭಾರತ್ ಉಪಯುಕ್ತವಾಗಬಹುದು ಎಂದು ಪ್ರಧಾನಿಯವರು ತಿಳಿಸಿದ್ದಾರೆ. ಜವಳಿ ತ್ಯಾಜ್ಯ ಇಡೀ ವಿಶ್ವಕ್ಕೆ ಹೊಸ ಚಿಂತೆಗೆ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ವಿಶ್ವಾದ್ಯಂತ ಹಳೆಯ ಉಡುಪುಗಳನ್ನು ಬೇಗ ಎಸೆದು, ಹೊಸ ಉಡುಪು ಖರೀದಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಜವಳಿ ತ್ಯಾಜ್ಯ ಹೊರಬೀಳುವ ದೇಶಗಳ ಪೈಕಿ ಭಾರತ ಮೂರನೇ ಸ್ಥಾನದಲ್ಲಿದೆ. ಈ ಸವಾಲು ಎದುರಿಸಲು ಭಾರತೀಯ ನವೋದ್ಯಮಗಳು ಕೆಲಸ ಆರಂಭಿಸಿವೆ. ನಗರಗಳು ತ್ಯಾಜ್ಯ ನಿರ್ವಹಣೆಯಲ್ಲಿ ತಮ್ಮದೇ ಆದ ಗುರುತು ಮೂಡಿಸುತ್ತಿವೆ. ಬೆಂಗಳೂರು ಕೂಡ ಆವಿಷ್ಕಾರ ತಂತ್ರಜ್ಞಾನ ಪರಿಹಾರಗಳಿಂದ ಅರ್ಧಕ್ಕಿಂತ ಹೆಚ್ಚು ಜವಳಿ ತ್ಯಾಜ್ಯವನ್ನು ಸಂಗ್ರಹಿಸಿ ನಿರ್ವಹಸುತ್ತಿದೆ. ಇದು ಇತರ ನಗರಗಳಿಗೆ ಉದಾಹರಣೆಯಾಗಿದೆ ಎಂದು ಹೇಳಿದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ (೩೧ ಸೆಕೆಂಡ್‌ಗಳು)**

ಮಕ್ಕಳು ಬೇಸಿಗೆ ರಜೆ ಸಂದರ್ಭದಲ್ಲಿ ಹೊಸ ಹವ್ಯಾಸ ಹಾಗೂ ಕೌಶಲ್ಯ ಬೆಳೆಸಿಕೊಳ್ಳಬೇಕಿದ್ದು, ಯಾವುದೇ ಶಾಲೆ, ಸಾಮಾಜಿಕ ಸಂಸ್ಥೆ ಅಥವಾ ಕೇಂದ್ರಗಳು ಬೇಸಿಗೆ ಚಟುವಟಿಕೆಗಳನ್ನು ಆಯೋಜಿಸಿದ್ದರೆ ಅದನ್ನು #ಒಥ್ಞಿಟುಜಚಿಥಿ ನಲ್ಲಿ ಹಂಚಿಕೊಳ್ಳುವಂತೆ ಪ್ರಧಾನಿಯವರು ಕೋರಿದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ (೨೧ ಸೆಕೆಂಡ್‌ಗಳು)**

ಈ ವರ್ಷದ ಯೋಗದಿನದ ಘೋಷವಾಕ್ಯ 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' ಎನ್ನುವುದಾಗಿದ್ದು, ಯೋಗದ ಮುಖಾಂತರ ಇಡೀ ವಿಶ್ವವನ್ನು ಆರೋಗ್ಯ ಪೂರ್ಣವನ್ನಾಗಿ ಮಾಡಲು ಬಯಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮನ್ ಕಿ ಬಾತ್‌ನಲ್ಲಿ ತಿಳಿಸಿದ್ದಾರೆ.

<><><>

ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಇಂದು ೫೦ ಮಾವೋವಾದಿಗಳು ಶರಣಾಗತರಾಗಿದ್ದಾರೆ. ಈ ಪೈಕಿ ೧೩ ಮಾವೋವಾದಿಗಳ ಸುಳಿವಿಗಾಗಿ ೬೮ ಲಕ್ಷ ರೂಪಾಯಿ ಬಹುಮಾನ ಸಾರಲಾಗಿತ್ತು. ಶರಣಾಗತರಾದ ಮಾವೋವಾದಿಗಳಲ್ಲಿ ಕಮಾಂಡರ್ ಹಾಗೂ ಉಪಕಮಾಂಡರ್ ಮಟ್ಟದವರು ಸೇರಿದ್ದಾರೆ ಎಂದು ಬಿಜಾಪುರ ಜಿಲ್ಲಾ ಪೊಲೀಸ್ ಮುಖ್ಯ ಅಧಿಕಾರಿ ಜಿತೇಂದ್ರ ಕುಮಾರ್ ಯಾದವ್ ತಿಳಿಸಿದ್ದಾರೆ. ಶರಣಾಗತರಾಗಿರುವ ಮಾವೋವಾದಿಗಳಿಗೆ ಸರ್ಕಾರದ ಪುನರ್‌ವಸತಿ ನೀತಿಯಡಿ ತಲಾ ೨೫ ಸಾವಿರ ರೂಪಾಯಿ ಚೆಕ್ ಹಸ್ತಾಂತರಿಸಲಾಯಿತು. ಮುಖ್ಯಮಂತ್ರಿ ವಿಷ್ಣುರಾವ್ ಈ ಸಂದರ್ಭದಲ್ಲಿ ಮಾತನಾಡಿ, ಸರ್ಕಾರ ಕೈಗೊಂಡಿರುವ ವಿವಿಧ ಜನಪರ ಕಾರ್ಯಕ್ರಮಗಳಿಂದಾಗಿ ಜನತೆಯಲ್ಲಿ ವಿಶ್ವಾಸ ಮೂಡುತ್ತಿದೆ. ಹಿಂಸಾಚಾರ ಕೈಬಿಟ್ಟು ಸಮಾಜದ ಶಾಂತಿಯುತ ಮುಖ್ಯವಾಹಿನಿಗೆ ವಾಪಸ್ ಆಗುತ್ತಿರುವವರ ಪುನರ್‌ವಸತಿಗೆ ಸರ್ಕಾರ ಕ್ರಮಕೈಗೊಳ್ಳುತ್ತಿದೆ ಎಂದು ಹೇಳಿದರು.

<><><>

ಬೆಂಗಳೂರಿನಿಂದ ಗುವಾಹತಿಗೆ ಹೊರಟಿದ್ದ ಕಾಮಾಕ್ಯ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಒಡಿಶಾದ ಕಟಕ್ ಜಿಲ್ಲೆಯ ನಿರ್ಗುಂದಿ ರೈಲ್ವೆ ನಿಲ್ದಾಣದ ಬಳಿ ಹಳಿ ತಪ್ಪಿದ್ದು, ಓರ್ವ ವ್ಯಕ್ತಿ ಮೃತಪಟ್ಟಿದ್ದಾನೆ. ಕನಿಷ್ಠ ೭ ಜನರಿಗೆ ಗಾಯಗಳಾಗಿವೆ. ಗಾಯಗೊಂಡವರನ್ನು ಕಟಕ್‌ನ ಆಸ್ಪತ್ರೆ ಹಾಗೂ ಎಸ್‌ಸಿಬಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸೇರಿಸಲಾಗಿದೆ. ಹಿರಿಯ ರೈಲ್ವೆ ಅಧಿಕಾರಿಗಳು ಹಾಗೂ ಎನ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ಸೇವಾ ಸಿಬ್ಬಂದಿ ರಕ್ಷಣಾ ಕಾರ್ಯಕ್ಕಾಗಿ ಸ್ಥಳಕ್ಕೆ ದಾವಿಸಿದ್ದಾರೆ. ಪ್ರಯಾಣಿಕರನ್ನು ಅವರ ನಿರ್ಗಮನ ತಾಣಗಳಿಗೆ ಸುರಕ್ಷಿತವಾಗಿ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ.

<><><>

ಭೂಕಂಪದಿಂದ ತತ್ತರಿಸಿರುವ ಮ್ಯಾನ್ಮಾರ್‌ಗೆ ಮಾನವೀಯ ನೆರವು ಒದಗಿಸಲು ಭಾರತೀಯ ನೌಕಾಪಡೆಯ ೨ ಹಡಗುಗಳು ಅಂಡಮಾನ್ ಮತ್ತು ನಿಕೋಬಾರ್‌ನಿಂದ ಇಂದು ತೆರಳಲಿವೆ.

ಕುಡಿಯುವ ನೀರು, ಆಹಾರ, ಔಷಧ, ಬಟ್ಟೆ ಹಾಗೂ ಇನ್ನಿತರ ತುರ್ತು ಸಾಮಗ್ರಿಗಳನ್ನು ಈ ಹಡಗಿನ ಮೂಲಕ ರವಾನಿಸಲಾಗುತ್ತಿದೆ.

<><><><>

ಐಪಿಎಲ್ ಟಿ-೨೦ ಕ್ರಿಕೆಟ್ - ವಿಶಾಖಪಟ್ಟಣಂನಲ್ಲಿ ಇಂದು ನಡೆದ ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ೭ ವಿಕೆಟ್‌ಗಳ ಜಯ ಸಾಧಿಸಿದೆ. ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ದರಬಾದ್ ತಂಡ ೧೮.೪ ಓವರ್‌ಗಳಲ್ಲಿ ೧೬೩ ರನ್ ಕಲೆಹಾಕುವಷ್ಟರಲ್ಲಿ ತನ್ನ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಡೆಲ್ಲಿ ಕ್ಯಾಪಿಟಲ್ಸ್ ೧೬ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೧೬೬ ರನ್ ಮಾಡಿತು. ಇಂದು ನಡೆಯುತ್ತಿರುವ ೨ನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿಯಾಗಿವೆ. ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ಫೀಲ್ಡಿಂಗ್ ಆಯ್ದುಕೊಂಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>